## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಕ್ರಿಮಿನಲ್ ಮಿಸ್ ನಂ. **6/2022**

| | | |
|---|---|---|
| ಸಾಕ್ಷಿದಾರರ ಹೆಸರು | ವರುಣ್ | ಆರ್.ಡಬ್ಲ್ಯೂ-3 |
| ತಂದೆಯ ಹೆಸರು | ಪ್ರವೀಣ ಡಿ | |
| ವಯಸ್ಸು | 32 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಸಹಾಯಕ ವ್ಯವಸ್ಥಾಪಕರು ಶಾಯಿ ಗಾರ್ಮೆಂಟ್ಸ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ | ದಿನಾಂಕಃ |
| ವಾಸಃ | ಭದ್ರಾವತಿ. | 26.02.2026 |

ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ

**1.** ದಿನಾಂಕಃ 05.03.2015 ರಿಂದ ನಾನು ಶಾಯಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದು, ಇತ್ತೀಚೆಗೆ ಸಹಾಯಕ ವ್ಯವಸ್ಥಾಪಕನೆಂದು ದಿನಾಂಕಃ 19.01.2026 ರಿಂದ ಸದರಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ.

**2.** ನ್ಯಾಯಾಲಯದ ಆದೇಶದಂತೆ ಈ ದಿನ ನಾನು ನಮ್ಮ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿರುವ ಜಯಲಕ್ಷ್ಮೀ ರವರ ನೇಮಕಾತಿ ಪತ್ರ, ವೇತನ ಪ್ರಮಾಣ ಪತ್ರಗಳು ಹಾಗೂ ಅವರು ನಮ್ಮ ಸಂಸ್ಥೆಯಲ್ಲಿ ಕೆಲಸಕ್ಕೆ ನೇಮಕಾತಿಯಾದ ಬಗೆಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

**3.** ಈ ಪ್ರಕರಣದ ಅರ್ಜಿದಾರರು ನಮ್ಮ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಸೇರಿಕೊಳ್ಳುವಾಗ ಸಲ್ಲಿಸಿದ ಅರ್ಜಿ, ನೇಮಕಾತಿ ಪತ್ರ, ತರಬೇತಿ ಪತ್ರ ಹಾಗೂ ಇತರೆ ದಾಖಲೆಗಳನ್ನು ಒಟ್ಟಾಗಿ ನಿಡಿ. 5 ಎಂದು, ನೇಮಕಾತಿ ಪತ್ರವನ್ನು ನಿಡಿ-6 ಎಂದು, ಅಕ್ಟೋಬರ್ 2025 ರ ಮತ್ತು ಜನವರಿ 2026 ರ ವೇತನ ಚೀಟಿಗಳನ್ನು ನಿಡಿ-7 ಮತ್ತು 8 ಎಂದು ಗುರುತಿಸಲಾಯಿತು.

**4.** ಸಾಕ್ಷಿಯು ನ್ಯಾಯಾಲಯದ ಮುಂದಿರುವ ಅರ್ಜಿದಾರರನ್ನು ನೋಡಿ ಗುರುತಿಸಿ ಸದರಿ ಅರ್ಜಿದಾರರಿಗೆ ಸಂಬಂಧಪಟ್ಟ ನಿಡಿ-5 ರಿಂದ 8 ರ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀಮತಿ. ಜಿ.ಸಿ.ಜೆ ವಕೀಲ ರವರಿಂದಃ-

**1.** ನಮ್ಮ ಗಾರ್ಮೆಂಟ್ಸ್‌ಗೆ ಮಾಲೀಕರು ಇದ್ದಾರೆ ಎಂದರೆ ಸರಿ. ನನಗಿಂತ ಉನ್ನತ ಅಧಿಕಾರವುಳ್ಳ ಹುದ್ದೆ ನಮ್ಮ ಗಾರ್ಮೆಂಟ್ಸ್‌ನಲ್ಲಿ ಇದೆ. ನಮ್ಮ ಗಾರ್ಮೆಂಟ್ಸ್ ನಲ್ಲಿ ಸುಮಾರು 2000 ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರೂ ಏನು ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಮಾಹಿತಿ ಇದೆ. ಉನ್ನತ ವಿದ್ಯಾಭ್ಯಾಸ ಹಾಗೂ ಕೌಶಲ್ಯ ಇರುವವರಿಗೆ ಉನ್ನತ ಹುದ್ದೆಗಳನ್ನು ನಮ್ಮ ಗಾರ್ಮೆಂಟ್ಸ್ ನಲ್ಲಿ ಕೊಡುತ್ತೇವೆ. ವಿದ್ಯಾಭ್ಯಾಸ ಇಲ್ಲದೇ ಇರುವವರಿಗೂ ಸಹ ನಮ್ಮಲ್ಲಿ ಕೆಲಸ ಇದೆ ಎಂದರೆ ಸರಿ. ಏನು ವಿದ್ಯಾಭ್ಯಾಸ ಮಾಡದೇ ಇರುವವರಿಗೆ ಸ್ವಚ್ಚತಾ ಕೆಲಸವನ್ನು ಸಹ ಕೊಡುತ್ತೇವೆ ಎಂದರೆ ಸರಿ. ನಮ್ಮಲ್ಲಿ ವಿದ್ಯಾವಂತರಿಗಿಂತ ಅವಿದ್ಯಾವಂತರೇ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಕನಿಷ್ಠ ವೇತನ ಮತ್ತು ಕಾರ್ಮಿಕ ಕಾಯಿದೆಯ ಪ್ರಕಾರ ಒಬ್ಬ ಕೌಶಲ್ಯ ಅನುಭವ ರಹಿತ ನೌಕರನಿಗೆ ಮಾಸಿಕ 12,521 ರೂ.ಗಳನ್ನು ನಮ್ಮ ಗಾರ್ಮೆಂಟ್ಸ್ ನಲ್ಲಿ ನೀಡುತ್ತಿದ್ದೇವೆ. ಅದರೊಂದಿಗೆ ಪಿ.ಎಫ್ ಮತ್ತು ಇ.ಎಸ್.ಐ ಸೌಲಭ್ಯ ಹಾಗೂ 5 ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಕೆಲಸ ಮಾಡಿದವರಿಗೆ ಗ್ರ್ಯಾಚುಟಿ ಅನ್ನು ಸಹ ನೀಡುತ್ತಿದ್ದೇವೆ.

**2.** ನಮ್ಮ ಗಾರ್ಮೆಂಟ್ಸ್ ನಲ್ಲಿ ಹೆಚ್ಚು ದೈಹಿಕ ಶ್ರಮವಹಿಸಿ ಕೆಲಸ ಮಾಡುವ ನೌಕರರು ಇದ್ದಾರೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.